**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತನೆಯ ಅಧಿವೇಶನ

**ಸಾರಾಂಶ**

(ದಿನಾಂಕ:17.02.2020 ರಿಂದ 20.02.2020ರವರೆಗೆ
ಹಾಗೂ
ದಿನಾಂಕ:02.03.2020 ರಿಂದ 24.03.2020 ರವರೆಗೆ)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು–560 001

*********

| ಕ್ರಮ ಸಂಖ್ಯೆ | ಶೀರ್ಷಿಕೆ | ವಿವರಣಾ ಪಟ್ಟಿ |
|---|---|---|
| 1. | ರಾಜ್ಯಪಾಲರ ಭಾಷಣ | |
| 2. | ಸಂತಾಪ ಸೂಚನೆ | |
| 3. | ಪ್ರಮಾಣ ವಚನ | |
| 4. | ನೂತನ ಸದಸ್ಯರ ಪರಿಚಯ/ಸಚಿವರು | |
| 5. | ಕಾರ್ಯದರ್ಶಿಯವರ ವರದಿ | 02 |
| 6. | ಪ್ರಶ್ನೆಗಳು | |
| 7. | ಶೂನ್ಯವೇಳೆ | 03 |
| 8. | ನಿಯಮ 72 | 04 |
| 9. | ನಿಯಮ 330 | 05 |
| 10. | ನಿಯಮ 330ಎ ಪ್ರಸ್ತಾವಗಳು | 06 |
| 11. | ನಿಯಮ 59 | 07 |
| 12. | ಹಕ್ಕುಚ್ಯುತಿ ಪ್ರಸ್ತಾವ | |
| 13. | ಸಭೆಯ ಮುಂದಿಡಲಾದ ಕಾಗದ ಪತ್ರಗಳು | 08 |
| 14. | ಪ್ರಕಟಣೆಗಳು | |
| 15. | ವರಿಗಳನ್ನೊಪ್ಪಿಸುವುದು | |
| 16. | ಅರ್ಜಿಗಳನ್ನೊಪ್ಪಿಸುವುದು | |
| 17. | ನಿರ್ಣಯ | |
| 18. | ವಿತ್ತೀಯ ಕಾರ್ಯಕಲಾಪ | |
| 19. | ಸಚಿವರ ಹೇಳಿಕೆ | |
| 20. | ಸದಸ್ಯರ ಗೈರು ಹಾಜರಿ | |
| 21. | ಕ್ರಿಯಾಲೋಪ | |
| 22. | ಸಂವಿಧಾನ ಕುರಿತು ವಿಶೇಷ ಚರ್ಚೆ | |
| 23. | ಸದಸ್ಯರುಗಳ ಖಾಸಗಿ ವಿಧೇಯಕ | |
| 24. | ಅರ್ಧಗಂಟೆ ಕಾಲಾವಧಿ ಚರ್ಚೆ | |
| 25. | ನಿಯಮ 68ರಡಿ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆ | |
| 26. | ಶಾಸನ ರಚನೆ | |
| 27. | ಧರಣಿ | |
| 28. | ಸಭಾತ್ಯಾಗ | |
| 29. | ಅಧಿವೇಶನ ಮುಂದೂಡಿಕೆ | |

# ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ನೂರ ನಲವತ್ತನೆಯ ಅಧಿವೇಶನವು ದಿನಾಂಕ:17.02.2020 ರಿಂದ 20.02.2020ರವರೆಗೆ ಹಾಗೂ ಮುಂದುವರೆದ ಉಪವೇಶನವು ದಿನಾಂಕ:02.03.2020 ರಿಂದ 24.03.2020ರವರೆಗೆ ಒಟ್ಟು 21 ದಿನಗಳ ಉಪವೇಶನ ನಡೆಯಿತು ಅಧಿವೇಶನದ ಒಟ್ಟು ಅವಧಿ 112 ಗಂಟೆಗಳು. (ವಿವರಣಾ ಪಟ್ಟಿ–1)

## 01. ರಾಜ್ಯಪಾಲರ ಭಾಷಣ

ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ದಿನಾಂಕ:17.02.2020ರಂದು ಕಾರ್ಯದರ್ಶಿಯವರು ಮಂಡಿಸಿದರು. ಸದರಿ ಭಾಷಣದ ಮೇಲಿನ ವಂದನಾರ್ಪಣಾ ಪ್ರಸ್ತಾವವನ್ನು ದಿನಾಂಕ:09.03.2020 ರಂದು ಮಂಡಿಸಿ ಅಂಗೀಕರಿಸಲಾಯಿತು.

## 02. ಸಂತಾಪ ಸೂಚನೆಗಳು

ಈ ಕೆಳಕಂಡ ಗಣ್ಯವ್ಯಕ್ತಿಗಳು ನಿಧನರಾದುದಕ್ಕೆ ಸದನದಲ್ಲಿ ಸಂತಾಪವನ್ನು ವ್ಯಕ್ತಪಡಿಸಲಾಯಿತು.

| ಕ್ರ. ಸಂ. | ಹೆಸರು | ಹೊಂದಿದ ಸ್ಥಾನಮಾನ | ದಿನಾಂಕ |
|---|---|---|---|
| 01 | ಟಿ.ಎನ್.ಚತುರ್ವೇದಿ | ಕರ್ನಾಟಕದ ಮಾಜಿ ರಾಜ್ಯಪಾಲರು | 17.02.2020 |
| 02 | ಡಿ.ಮಂಜುನಾಥ | ವಿಧಾನ ಪರಿಷತ್ತಿನ ಮಾಜಿ ಸಭಾಪತಿ, ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಉಪಸಭಾಧ್ಯಕ್ಷರು | 17.02.2020 |
| 03 | ಡಾ:ವೈಜನಾಥ ಪಾಟೀಲ್ | ಮಾಜಿ ಸಚಿವರು, ವಿಧಾನ ಪರಿಷತ್ತಿನ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರು | 17.02.2020 |
| 04 | ಜಿ.ಮಾದಪ್ಪ | ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 17.02.2020 |
| 05 | ಮಲ್ಲಾರಿಗೌಡ ಶಂಕರಗೌಡ ಪಾಟೀಲ್ | ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರು | 17.02.2020 |
| 06 | ಕೆ. ಅಮರನಾಥಶೆಟ್ಟಿ | ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರು | 17.02.2020 |
| 07 | ನಾರಾಯಣರಾವ್ ಗೋವಿಂದ ತರಳೆ | ವಿಧಾನ ಸಭೆಯ ಮಾಜಿ ಸದಸ್ಯರು | 17.02.2020 |
| 08 | ಚಂದ್ರಕಾಂತ್ ಗುರುಪಾದಪ್ಪ ಸಿಂದೋಲ್ | ವಿಧಾನ ಸಭೆಯ ಮಾಜಿ ಸದಸ್ಯರು | 17.02.2020 |

| | | | |
|---|---|---|---|
| 09 | ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿ | ಪೇಜಾವರ ಮಠದ ಮುಖ್ಯಸ್ಥರು | 17.02.2020 |
| 10 | ಕದ್ರಿ ಗೋಪಾಲನಾಥ್ | ಸ್ಯಾಕ್ಸೋಫೋನ್ ವಾದಕರು | 17.02.2020 |
| 11 | ಡಾ: ಎಂ.ಚಿದಾನಂದಮೂರ್ತಿ | ಹಿರಿಯ ಲೇಖಕರು | 17.02.2020 |
| 12 | ಹೊಸ್ತೋಟ ಮಂಜುನಾಥ ಭಾಗವತ | ಯಕ್ಷಗಾನ ಪಾರಂಗತರು | 17.02.2020 |
| 13 | ಡಾ: ಚೆನ್ನಣ್ಣ ವಾಲೀಕಾರ | ಹಿರಿಯ ಸಾಹಿತಿ | 17.02.2020 |
| 14 | ಪ್ರೊ:ಎಸ್.ಎಸ್.ಕಟಗಿಹಳ್ಳಿಮಠ | ಖ್ಯಾತ ಕೃಷಿ ವಿಜ್ಞಾನಿ | 17.02.2020 |
| 15 | ಡಾ: ನವರತ್ನ ಶ್ರೀನಿವಾಸ ರಾಜರಾಮ್ | ನಾಸಾ ಸಂಸ್ಥೆಯ ನಿವೃತ್ತ ವಿಜ್ಞಾನಿ | 17.02.2020 |
| 16 | ಚಂದ್ರಕಾಂತ ಕರದಳ್ಳಿ | ಹಿರಿಯ ಸಾಹಿತಿ | 17.02.2020 |
| 17 | ಡಾ: ಆರ್.ಸತ್ಯನಾರಾಯಣ | ಖ್ಯಾತ ಸಂಗೀತ ಶಾಸ್ತ್ರಜ್ಞರು | 02.03.2020 |
| 18 | ಸಿ. ಚೆನ್ನಿಗಪ್ಪ. | ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರು. | 02.03.2020 |
| 19 | ಆರ್.ಎಸ್. ಭಾಗವತ್ | ವಿಧಾನ ಪರಿಷತ್ತಿನ ಮಾಜಿ ಸದಸ್ಯರು. | 02.03.2020 |
| 20 | ಪ್ರೋ. ಷ. ಶೆಟ್ಟರ್ | ಅಂತರಾಷ್ಟ್ರೀಯ ಸಂಶೋಧಕ ಮತ್ತು ಹಿರಿಯ ಸಾಹಿತಿಗಳು. | 02.03.2020 |
| 21 | ಹಂಸರಾಜ್ ಭರದ್ವಾಜ್ | ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರು | 09.03.2020 |
| 22 | ಶಿವಸ್ವರೂಪಿಣಿ ಮಾತೆ | ಯಾನಾಗುಂದಿಯ ಮಾತೆ ಮಾಣಿಕೇಶ್ವರಿ | 09.03.2020 |
| 23 | ಪಾಟೀಲ್ ಪುಟ್ಟಪ್ಪ | ಹಿರಿಯ ಸ್ವಾತಂತ್ರ್ಯ ಹೋರಟಗಾರ | 17.03.2020 |

**02. ಪ್ರಮಾಣ ವಚನ**

ದಿನಾಂಕ:18.02.2020ರಂದು ಶ್ರೀ ಲಕ್ಷ್ಮಣ ಸಂಗಪ್ಪ ಸವದಿ ಅವರು ವಿಧಾನ ಪರಿಷತ್ತಿನ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು.

**04. ನೂತನ ಸಚಿವರುಗಳ ಪರಿಚಯ**

ದಿನಾಂಕ:18.02.2020ರಂದು ಈ ಕೆಳಕಂಡ ನೂತನ ಸಚಿವರುಗಳನ್ನು ಮಾನ್ಯ ಸಭಾನಾಯಕರು ಸದನಕ್ಕೆ ಪರಿಚಯಿಸಿದರು.

1. ಶ್ರೀ ವಿ.ಸೋಮಣ್ಣ, ಮಾನ್ಯ ವಸತಿ ಸಚಿವರು
2. ಶ್ರೀ ಕೆ. ಗೋಪಾಲಯ್ಯ, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು.
3. ಶ್ರೀ ಎಸ್.ಟಿ.ಸೋಮಶೇಖರ್, ಮಾನ್ಯ ಸಹಕಾರ ಸಚಿವರು.
4. ಶ್ರೀ ಸಿ.ಸಿ.ಪಾಟೀಲ್, ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು.
5. ಶ್ರೀ ಆನಂದಸಿಂಗ್, ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು.

6. ಶ್ರೀಮತಿ ಶಶಿಕಲಾ ಜೊಲ್ಲೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಶೇಷ ಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.
7. ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಸಾರಿಗೆ ಸಚಿವರು.
8. ಶ್ರೀ ಅರೆಬೈಲು ಹೆಬ್ಬಾರ್ ಶಿವರಾಮ್, ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು.

ದಿನಾಂಕ:19.02.2020ರಂದು ಈ ಕೆಳಕಂಡ ನೂತನ ಸಚಿವರುಗಳನ್ನು ಮಾನ್ಯ ಸಭಾನಾಯಕರು ಸದನಕ್ಕೆ ಪರಿಚಯಿಸಿದರು.

1. ಶ್ರೀ ಬಸವರಾಜ ಬೊಮ್ಮಾಯಿ, ಮಾನ್ಯ ಗೃಹ ಸಚಿವರು.
2. ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್, ಮಾನ್ಯ ಕೃಷಿ ಸಚಿವರು.

**05. ಕಾರ್ಯದರ್ಶಿಯವರ ವರದಿ**

ದಿನಾಂಕ:18.02.2020ರಂದು ಕಳೆದ ಅಧಿವೇಶನದಿಂದೀಚೆಗೆ ರಾಷ್ಟ್ರಪತಿಯವರಿಂದ/ರಾಜ್ಯಪಾಲರಿಂದ ಅಂಗೀಕೃತಗೊಂಡ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಸದನದಲ್ಲಿ ಮಂಡಿಸಿದರು. (ವಿವರಣಾ ಪಟ್ಟಿ–2)

**06.ಪ್ರಶ್ನೆಗಳು**

ದಿನಾಂಕ:17.02.2020 ರಿಂದ 24.03.2020ರವರೆಗೆ ನಡೆದ ಅಧಿವೇಶನದಲ್ಲಿ ಒಟ್ಟು 2241 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 225 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, 197 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ಮತ್ತು ಲಿಖಿತ ಮೂಲಕ ಉತ್ತರಿಸುವ ಒಟ್ಟು 1705 ಪ್ರಶ್ನೆಗಳ ಪೈಕಿ 1437 ಪ್ರಶ್ನೆಗಳಿಗೆ ಉತ್ತರವನ್ನು ಮಂಡಸಲಾಯಿತು

**07. ಶೂನ್ಯವೇಳೆ**

ಪ್ರಸ್ತುತ ಅಧಿವೇಶನದಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲಾದ ಸೂಚನೆಗಳನ್ನು ವಿವರಣಾ ಪಟ್ಟಿ–3ರಲ್ಲಿ ವಿವರಿಸಿದೆ.

**08. ನಿಯಮ 72**

ಪ್ರುಸ್ತುತ ಅಧಿವೇಶನದಲ್ಲಿ ನಿಯಮ 72 ರಡಿ ಚರ್ಚಿಸಿರುವ ಸೂಚನೆಗಳನ್ನು ವಿವರಣಾ ಪಟ್ಟಿ– 4 ರ್ಲಲಿ ವಿವರಿಸಿದೆ

**09. ನಿಯಮ 330ರ ಅಡಿ ಪ್ರಸ್ತಾವಗಳು**

ಪ್ರಸ್ತುತ ಅಧಿವೇಶನದಲ್ಲಿ ನಿಯಮ 330 ರಡಿ ಪ್ರಸ್ತಾಪಿಸಿರುವ ಸೂಚನೆಗಳನ್ನು ವಿವರಣಾ ಪಟ್ಟಿ–5ರಲ್ಲಿ ವಿವರಿಸಿದೆ

## 10.ನಿಯಮ 330ಎ ವಿಶೇಷ ಪ್ರಸ್ತಾವಗಳು

ಪ್ರಸ್ತುತ ಅಧಿವೇಶನದಲ್ಲಿ ನಿಯಮ 330ಎ ರಡಿ ಪ್ರಸ್ತಾಪಿಸಿರುವ ಸೂಚನೆಗಳನ್ನು ವಿವರಣಾ ಪಟ್ಟಿ–6ರಲ್ಲಿ ವಿವರಿಸಿದೆ

## 11. ನಿಯಮ 59 (ನಿಲುವಳಿ ಸೂಚನೆ)

ಪ್ರಸ್ತುತ ಅಧಿವೇಶನದಲ್ಲಿ ಸ್ವೀಕರಿಸಲಾದ ನಿಲುವಳಿ ಸೂಚನೆಗಳನ್ನು ವಿವರಣಾ ಪಟ್ಟಿ–7 ರಲ್ಲಿ ವಿವರಿಸಲಾಗಿದೆ.

## 12. ಹಕ್ಕುಚ್ಯುತಿ ಪ್ರಸ್ತಾವನೆ

1. ಮಾನ್ಯ ಶಾಸಕರಾದ ಶ್ರೀ ಕೆ.ಸಿ.ಕೊಂಡಯ್ಯರವರು, ಶ್ರೀ ಮಂಜುನಾಥ್, ಅಪರ ನಿರ್ದೇಶಕರು, ಟೌನ್ ಪ್ಲಾನಿಂಗ್, ಬಿ.ಬಿ.ಎಂ.ಪಿ ಇವರಿಗೆ ದಿನಾಂಕ:04.12.2019 ರಂದು ಹಾಗೂ 31.01.2020 ರಂದು ನಡೆದ ಭರವಸೆಗಳ ಸಮಿತಿ ಸಭೆಗಳಿಗೆ ಹಾಜರಾಗುವಂತೆ ಪತ್ರಗಳನ್ನು ಬರೆಯಲಾಗಿದ್ದರು. ಎರಡು ಸಭೆಗಳಿಗೆ ಹಾಜರಾಗದೇ ಹಾಗೂ ಗೈರು ಹಾಜರಿಗೆ ಪೂರ್ವಭಾವಿಯಾಗಿ ಅನುಮತಿ ಪಡೆಯದೆ ಇರುವುದನ್ನು ಸಮಿತಿಗೆ ತೋರಿರುವ ಅಗೌರವವೆಂದು ಪರಿಗಣಿಸಿ ಅವರ ವಿರುದ್ಧ ಹಕ್ಕುಚ್ಯುತಿ ಸೂಚನೆಯನ್ನು ದಿನಾಂಕ:11.03.2020 ರಂದು ಮಂಡಿಸಿದರು ಮಾನ್ಯ ಸಭಾಪತಿಯವರು ಹಕ್ಕುಭಾದ್ಯತಾ ಸಮಿತಿಗೆ ವಹಿಸಿದರು.

2. ಮಾನ್ಯ ಶಾಸಕರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು ಧಾರವಾಡ ಜಿಲ್ಲಾ ಕೇಂದ್ರದಲ್ಲಿ ಜರುಗಿದ ಕರ್ನಾಟಕ ಕುಸ್ತಿಹಬ್ಬ ಕಾರ್ಯಕ್ರಮದ ಸಂಘಟನಾ ಸಮಿತಿ ಸಭೆಗಳಿಗೆ ಸಮಿತಿಯ ಸದಸ್ಯರನ್ನು ಆಹ್ವಾನಿಸದೆ ಕರ್ತವ್ಯಲೋಪವೆಸಗಿರುವ ಇಲಾಖಾಧಿಕಾರಿಗಳ ವಿರುದ್ಧ ಮಂಡಿಸಿದ ಹಕ್ಕುಚ್ಯುತಿ ಸೂಚನೆಯನ್ನು ದಿನಾಂಕ:11.03.2020 ರಂದು ಮಂಡಿಸಿದರು ಮಾನ್ಯ ಸಭಾಪತಿಯವರು ಹಕ್ಕುಭಾದ್ಯತಾ ಸಮಿತಿಗೆ ವಹಿಸಿದರು.

## 13. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

01. ದಿನಾಂಕ:18.02.2020 ರಂದು 1 ಮತ್ತು 2 ಪಟ್ಟಿಗಳನ್ನು ಹಾಗೂ ದಿನಾಂಕ: 18.03.2020 ರಂದು 3 ಮತ್ತು 4 ಪಟ್ಟಿಗಳನ್ನು ಮಂಡಿಸಲಾಯಿತು. (ವಿವರಣಾ ಪಟ್ಟಿ 8)

02. ದಿನಾಂಕ:19.02.2020ರಂದು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2018ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ವರದಿಯನ್ನು(ಸಂಖ್ಯೆ–5) ಮಂಡಿಸಿದರು.

## 14. ಪ್ರಕಟಣೆ

**01**. ಮಾನ್ಯ ಸಭಾಪತಿಯವರ ಮತ್ತು ಮಾನ್ಯ ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಮಾನ್ಯ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು 139ನೇ ಅಧಿವೇಶನದಲ್ಲಿ ನಾಮನಿರ್ದೇಶನ ಮಾಡಲಾದ ಮಾನ್ಯ ಶಾಸಕರುಗಳನ್ನು ಪ್ರಸಕ್ತ ಅಧಿವೇಶನಕ್ಕೂ ಮುಂದುವರೆಸಲಾಗಿದೆ ಎಂದು ದಿನಾಂಕ:17.02.2020 ರಂದು ಪ್ರಕಟಿಸಿದರು.

**02.** ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ರಚಿಸಲಾಗಿರುವ ಬಗ್ಗೆ ದಿನಾಂಕ:17.02.2020 ರಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**03**. ದಿನಾಂಕ:20.02.2020 ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿಯನ್ನು ಪ್ರಕಟಿಸಲಾಯಿತು.

**04**. ದಿನಾಂಕ:12.03.2020 ರಂದು ಶ್ರೀ ಎಂ. ನಾರಾಯಣಸ್ವಾಮಿ ಅವರನ್ನು ಕರ್ನಾಟಕ ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಪ್ರಕಟಿಸಿದರು.

**05**. ದಿನಾಂಕ: 12.03.2020ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿಯನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**06**. ದಿನಾಂಕ:17.03.2020 ರಂದು ರಾಜ್ಯದಲ್ಲಿ ಹರಡುತ್ತಿರುವ ಕೋವಿಡ್-19 ಕೊರೊನಾ ವೈರಾಣು ಹರಡುವ ವೇಗ ಮತ್ತು ವಿಧಾನಗಳನ್ನು ಗಮನದಲ್ಲಿಟ್ಟುಕೊಂಡು ಮುಂಜಾಗ್ರತಾ ಕ್ರಮವಾಗಿ ವೈರಾಣು ನಾಶಕ ಔಷಧಿಯನ್ನು ಸಿಂಪಡಿಸಲು ಕ್ರಮಕೈಗೊಳಬೇಕೆಂದು ಪ್ರಕಟಿಸಿದರು.

**07**. ದಿನಾಂಕ:18.03.2020 ರಂದು ರಾಜ್ಯದಲ್ಲಿ ವ್ಯಾಪಕವಾಗಿ ಹರಡುತ್ತಿರುವ ನೋವೆಲ್ ಕೋವಿಡ್-19 ಕೊರೊನಾ ವೈರಸ್ ಅನ್ನು ಗಮನದಲ್ಲಿಟ್ಟುಕೊಂಡು ಮುಂಜಾಗೃತಾ ಕ್ರಮವಾಗಿ ಕರ್ನಾಟಕ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಹಾಗೂ ಸಭಾಪತಿಯವರ ಗ್ಯಾಲರಿಗಳಿಗೆ ಮುಂದಿನ ಆದೇಶದವರೆಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**08**. ದಿನಾಂಕ:20.03.2020 ರಂದು ಸ್ವಾಮಿ ವಿವೇಕಾನಂದ ಯೋಗ ಅನುಷ್ಠಾನ ಸಂಸ್ಥಾನ ವತಿಯಿಂದ ವಿಧಾನ ಮಂಡಲದ ಮಾನ್ಯ ಶಾಸಕರುಗಳಿಗೆ ಏರ್ಪಡಿಸಲಾಗಿದ್ದ "ಆರೋಗ್ಯಕ್ಕಾಗಿ ಯೋಗ" ಶಿಬಿರವನ್ನು ಮುಂದುವರೆಸಲಾಗಿರುತ್ತದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

**09**. ದಿನಾಂಕ:24.03.2020 ರಂದು ಈ ಕೆಳಕಂಡ ಪ್ರಕರಣಗಳನ್ನು ಪರಿಶೀಲಿಸಲು ಸದನ ಸಮಿತಿಯನ್ನು ರಚಿಸಲಾಯಿತು.

01. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಕ್ಕೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಲು ರಚಿಸಲಾದ ವಿಶೇಷ ಸದನ ಸಮಿತಿ

02. ರಾಜ್ಯದಲ್ಲಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ

ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಲು ರಚಿಸಲಾದ ವಿಶೇಷ ಸದನ ಸಮಿತಿ

## 15. ವರದಿಗಳನ್ನೊಪ್ಪಿಸುವುದು

| ಕ್ರಮ ಸಂಖ್ಯೆ | ಸಮಿತಿಯ ಹೆಸರು | ಒಪ್ಪಿಸಿದ ದಿನಾಂಕ | ವರದಿಯ ಸಂಖ್ಯೆ |
|---|---|---|---|
| 1. | ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿ | 20.02.2020 | 29 ಮತ್ತು 30ನೇ ವಿಶೇಷ ಮಧ್ಯಂತರ ವರದಿ |
| 2. | ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ | 09.03.2020 | 36ನೇ ವರದಿ |
| 3. | ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ | 10.03.2020 | 2 ಮತ್ತು 3ನೇ ವರದಿ |
| 4. | ವಿಧಾನ ಪರಿಷತ್ತಿನ ಸದಸ್ಯರುಗಳ ಖಾಸಗಿ ವಿಧೇಯಕ ಮತ್ತು ನಿರ್ಣಯಗಳ ಸಮಿತಿ | 13.03.2020 | ಮೊದಲನೆಯ ವರದಿ |
| 5. | ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿ | 13.03.2020 | 31ನೇ ವರದಿ |
| 6. | ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿ | 13.03.2020 | 48ನೇ ವರದಿ |
| 7. | ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿ | 17.03.2020 | 96ನೇ ವರದಿ |
| 8. | ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿ | 18.03.2020 | 27ನೇ ವರದಿ |
| 9. | ವಿಧಾನ ಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ | 18.03.2020 | 35ನೇ ವರದಿ |
| 10. | ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ | 19.03.2020 | 1ನೇ ವರದಿ |

## 16. ಅರ್ಜಿಯನ್ನೊಪ್ಪಿಸುವುದು

01. 2011, 2014 ಮತ್ತು 2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ಆಯ್ಕೆ ಪ್ರಕ್ರಿಯೆಗಳಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ ಸರ್ಕಾರ ನಿಷ್ಪಕ್ಷಪಾತವಾಗಿ ಮತ್ತು ಪ್ರಾಮಾಣಿಕವಾಗಿ ಕ್ರಮಕೈಗೊಳ್ಳಬೇಕೆಂಬ ವಿಷಯದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಅವರು ದಿನಾಂಕ:19.02.2020 ರಂದು ಅರ್ಜಿಯನ್ನು ಒಪ್ಪಿಸಿದರು.

## 17. “ನಿರ್ಣಯ”

ದಿನಾಂಕ:19.03.2020 ರಂದು ಮಾನ್ಯ ಸಭಾನಾಯಕರು ಸಂವಿಧಾನದ ಕುರಿತು ನಡೆದ ವಿಶೇಷ ಚರ್ಚೆಗೆ ಸಂಬಂಧಿಸಿದಂತೆ ಈ ಕೆಳಕಂಡ ನಿರ್ಣಯವನ್ನು ಮಂಡಿಸಿ ಅಂಗೀಕರಿಸಿದರು.

“ ಕರ್ನಾಟಕ ವಿಧಾನ ಪರಿಷತ್ತಿನ ಶಾಸಕರುಗಳಾದ ನಾವು ಭಾರತದ ಸಂವಿಧಾನವನ್ನು ಅಂಗೀಕರಿಸಿದ 70ನೇ ವರ್ಷದ ಸ್ಮರಣೆಗಾಗಿ ಸಂವಿಧಾನ ದಿನವನ್ನು ಆಚರಿಸುತ್ತಾ, ಸಂವಿಧಾನದ

ಕುರಿತಾಗಿ ವಿಶೇಷ ಚರ್ಚೆಯನ್ನು ಹಮ್ಮಿಕೊಂಡು ಸಂವಿಧಾನ ರಚನೆಗೆ ಕಾರಣೀಭೂತರಾದ ಎಲ್ಲಾ ಮಹನೀಯರ ವಿಚಾರಧಾರೆಗಳನ್ನು ಕೃತಜ್ಞತಾಪೂರ್ವಕವಾಗಿ ನೆನಪಿಸಿಕೊಂಡು ಅವರಿಗೆ ಈ ಸದನದ ಮೂಲಕ ಗೌರವ ಸಲ್ಲಿಸಬಯಸುತ್ತೇವೆ."

## 18. ವಿತ್ತೀಯ ಕಾರ್ಯಕಲಾಪ

01. ದಿನಾಂಕ:05.03.2020 ರಂದು ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) ಅವರು 2020-2021ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಒಪ್ಪಿಸಿದರು.

02. ದಿನಾಂಕ:18.03.2020 ರಂದು ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) ಅವರು 2019-20ನೇ ಸಾಲಿನ ಪೂರಕ ಅಂದಾಜುಗಳನ್ನು (ಮೂರನೇ ಹಾಗೂ ಅಂತಿಮ ಕಂತು) ಒಪ್ಪಿಸಿದರು.

## 19. ಸಚಿವರ ಹೇಳಿಕೆ

01. ದಿನಾಂಕ:04.03.2020 ರಂದು ವಿಶ್ವದೆಲ್ಲೆಡೆ ಕೊರೋನಾ ವೈರಸ್ ಹರಡಿದ್ದು, ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹೇಳಿಕೆ ನೀಡಿದರು.

02. ದಿನಾಂಕ:16.03.2020 ರಂದು ಮಾನ್ಯ ಪಶುಸಂಗೋಪನೆ, ಹಜ್ ಹಾಗೂ ವಕ್ಫ್ ಸಚಿವರು ಪಶುಸಂಗೋಪನಾ ಇಲಾಖೆಯ ಯಾವ್ಯಾವ ಅಧಿಕಾರಿಗಳು ನಿಯೋಜನೆ ಮೇರೆಗೆ ಬೇರೆ ಇಲಾಖೆಗೆ ಹೋಗಿದ್ದಾರೋ ಅವರೆಲ್ಲರನ್ನು ಪಶುಸಂಗೋಪನಾ ಇಲಾಖೆಗೆ ಹಿಂತೆಗೆದುಕೊಳ್ಳುತ್ತೇವೆ ಎಂದು ಹೇಳಿಕೆ ನೀಡಿದರು.

03.ದಿನಾಂಕ:18.03.2020 ರಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಇಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಕೊರೋನಾ ವೈರಸ್ ಕೋವಿಡ್-19 ಖಾಯಿಲೆಯು ವ್ಯಾಪಕವಾಗಿ ಹರಡದಂತೆ ತಡೆಗಟ್ಟಲು ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರು ಮತ್ತು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳು ಸಾರ್ವಜನಿಕರ ಮೊಗಸಾಲೆಗಳಿಗೆ ಸಾರ್ವಜನಿಕರ ಭೇಟಿಯನ್ನು ನಿರ್ಬಂಧಿಸಿರವುದನ್ನು ಅಭಿನಂದಿಸುತ್ತೇನೆಂದು ಹೇಳಿಕೆಯನ್ನು ನೀಡಿದರು.

04. ದಿನಾಂಕ:19.03.2020 ರಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ರಾಜ್ಯದಲ್ಲಿ 15ಕ್ಕಿಂತಲೂ ಹೆಚ್ಚಿಗೆ ಪ್ರಕರಣಗಳು ದಾಖಲಾಗಿದ್ದು, ಈಗಾಗಲೇ ರಚಿಸಲಾಗಿರುವ ಟಾಸ್ಕ್ ಪೋರ್ಸ್ ಬಗ್ಗೆ ಹೇಳಿಕೆ ನೀಡಿದರು.

05.ದಿನಾಂಕ:20.03.2020 ರಂದು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಹೇಳಿಕೆ ನೀಡಿದರು.

06. ದಿನಾಂಕ:23.03.2020 ರಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ರಾಜ್ಯಾದ್ಯಂತ ಕೋವಿಡ್-19 ಕೊರೋನ ಖಾಯಿಲೆಯು ಹರಡುತ್ತಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಸದರಿ ವೈರಸ್ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ಹೇಳಿಕೆ ನೀಡಿದರು.

## 20. ಸದಸ್ಯರ ಗೈರು ಹಾಜರಿ

01. ಶ್ರೀ ಕೆ.ವಿ. ನಾರಾಯಣಸ್ವಾಮಿ ಅವರು ದಿನಾಂಕ:17.02.2020 ರಿಂದ 20.02.2020 ಹಾಗೂ 02.03.2020 ರಿಂದ 05.03.2020ರವರೆಗೆ ಅಧಿವೇಶನದ ಉಪವೇಶನದಲ್ಲಿ ಭಾಗವಹಿಸದಿರಲು ಹಾಜರಾತಿ ವಿನಾಯಿತಿ ನೀಡಲಾಗಿದೆ ಎಂದು ದಿನಾಂಕ:18.02.2020 ರಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

02. ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಮಾನ್ಯ ಸರ್ಕಾರಿ ಮುಖ್ಯ ಸಚೇತಕರು) ಅವರು ದಿನಾಂಕ:10.03.2020 ರಿಂದ 17.03.2020ರವರೆಗೆ ಅಧಿವೇಶನದ ಉಪವೇಶನದಲ್ಲಿ ಭಾಗವಹಿಸದಿರಲು ಹಾಜರಾತಿ ವಿನಾಯಿತಿ ನೀಡಲಾಗಿದೆ ಎಂದು ದಿನಾಂಕ:11.03.2020 ರಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

## 21. ಕ್ರಿಯಾಲೋಪ

ಮಾನ್ಯ ಸದಸ್ಯರಾದ ಶ್ರೀ ಆಯನೂರು ಮಂಜುನಾಥ್ ರವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 329ರಡಿ ಕ್ರಿಯಾಲೋಪವನ್ನು ಎತ್ತುವುದರ ಮೂಲಕ **"ಕೆಳಮನೆಯ ಸದಸ್ಯರು ಸದನದ ಹೊರಗಡೆ ಮಾತನಾಡಿರುವ ವಿಷಯಕ್ಕೆ ಕ್ಷಮಾಪಣೆ ಕೋರಬೇಕೆಂದು ಪ್ರಸ್ತಾಪಿಸಿರುವುದು ನಿಯಮಾವಳಿ ಪ್ರಕಾರ ಸರಿಯಾದ ಕ್ರಮವಲ್ಲವೆಂದು"** ತಿಳಿಸಿದರು.

## 22. ಸಂವಿಧಾನ ಕುರಿತು ವಿಶೇಷ ಚರ್ಚೆ

ದಿನಾಂಕ:04.03.2020 ರಿಂದ 19.03.2020ರವರೆಗೆ ಸಂವಿಧಾನ ಕುರಿತು ವಿಶೇಷ ಚರ್ಚೆಯನ್ನು ಒಟ್ಟು 8 ದಿನಗಳಲ್ಲಿ 36 ಸದಸ್ಯರು ಚರ್ಚೆ ಮಾಡಿರುತ್ತಾರೆ

## 23. ಸದಸ್ಯರ ಖಾಸಗಿ ಕಾರ್ಯಕಲಾಪಗಳು

ಶ್ರೀ ಶರಣಪ್ಪ ಮಟ್ಟೂರು ಅವರು 2018ನೇ ಸಾಲಿನ **'ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ವಿಧೇಯಕ'ವನ್ನು** ಮಂಡಿಸಿರುವ ಉದ್ದೇಶದ ಬಗ್ಗೆ ಚರ್ಚೆಯನ್ನು ಮುಂದುವರೆಸಿ ಮಾತನಾಡಿದರು.

ಮಾನ್ಯ ಕಾನೂನು ಮತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿ ಈ ಸಂಬಂಧದಲ್ಲಿ ಕಾಯಿದೆಗಳು ಈಗಾಗಲೇ ಜಾರಿಯಲ್ಲಿರುವುದರಿಂದ ಖಾಸಗಿ ವಿಧೇಯಕವನ್ನು ಹಿಂಪಡೆಯಲು ವಿನಂತಿಸಿದರು.

## 24. ಅರ್ಧ ಗಂಟೆ ಕಾಲಾವಧಿ ಚರ್ಚೆ

ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದಿಂದ ನಿಯಮಬಾಹಿರವಾಗಿ ಮಾಡಲಾಗಿರುವ ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರ ನಿಯೋಜನೆಗೆ ಸಂಬಂಧಿಸಿದಂತೆ ದಿನಾಂಕ: 09.03.2020ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 72 (558)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯದ ಕುರಿತು ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಚರ್ಚೆಯನ್ನು ಮಾಡಿದರು.

## 25. ನಿಯಮ 68ರಡಿ ಚರ್ಚೆ

### ನಿಯಮ 68ರಡಿ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆ

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಸಲ್ಲಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 1 | ಕೆ.ಟಿ. ಶ್ರೀಕಂಠೇಗೌಡ ಮತ್ತು ಬಸವರಾಜ ಶಿವಲಿಂಗಪ್ಪ ಹೊರಟ್ಟಿ | 20.03.2020 | ಮಂಡ್ಯ ಜಿಲ್ಲೆಯಲ್ಲಿ ಪರವಾನಗಿ ಪಡೆಯದೆ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಅಕ್ರಮ ಸಾಗಾಣಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಕುರಿತು | ಉತ್ತರಿಸಲಾಯಿತು |
| 2 | ಎಸ್.ಆರ್.ಪಾಟೀಲ್, ಮಾನ್ಯ ವಿರೋಧ ಪಕ್ಷದ ನಾಯಕರು | 23.03.2020 | ರಾಜ್ಯಾದ್ಯಂತ ಕೋವಿಡ್-19 ಕೊರೋನಾ ಖಾಯಿಲೆಯು ಹರಡುತ್ತಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಸದರಿ ವೈರಸ್ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಕುರಿತು | ಉತ್ತರಿಸಲಾಯಿತು |
| 3 | ಎಸ್.ಆರ್.ಪಾಟೀಲ್, ಮಾನ್ಯ ವಿರೋಧ ಪಕ್ಷದ ನಾಯಕರು | 16.03.2020 | ರಾಜ್ಯದಲ್ಲಿ ಕೊರೋನಾ ವೈರಸ್ ಕಾಯಿಲೆಯು ವ್ಯಾಪಕವಾಗಿ ಹರಡುತ್ತಿರುವ ಬಗ್ಗೆ | ಉತ್ತರಿಸಲಾಯಿತು |

## 26. ಧರಣಿ

01. ದಿನಾಂಕ:18.02.2020 ರಂದು ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್ ಅವರು ಉಪಯೋಗಿಸುತ್ತಿರುವ ಪದ ಸರಿಯಿಲ್ಲವೆಂದು ಕ್ಷಮೆ ಕೇಳಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಡೆಸಿದರು.

02. ದಿನಾಂಕ:20.02.2020 ರಂದು ಶಿಕ್ಷಕರ ಮೇಲೆ ಆಪಾದಿಸಿ ಮೊಕದ್ದಮೆ ವಾಪಸ್ಸು ಪಡೆಯಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಡೆಸಿದರು.

03. ದಿನಾಂಕ:02.03.2020 ರಂದು ಸ್ವಾತಂತ್ರ್ಯ ಹೋರಾಟಗಾರ ಶ್ರೀ ಹೆಚ್.ಎಸ್. ದೊರೆಸ್ವಾಮಿ ಅವರ ಬಗ್ಗೆ ಶ್ರೀ ಬಸನಗೌಡ ಪಾಟೀಲ್ ಯತ್ನಾಳ್ ಅವಹೇಳನಕಾರಿಯಾಗಿ ಮಾತನಾಡಿರುವ

ಬಗ್ಗೆ ಕ್ಷಮೆ ಕೇಳಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಡೆಸಿದರು.

04. ದಿನಾಂಕ:20.03.2020 ರಂದು ಶ್ರೀ ರಘು ಆಚಾರ್ ಅವರು ತಾವು ನೀಡಿರುವ ಸದಸ್ಯರ ಖಾಸಗಿ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಧರಣಿ ನಡೆಸಿದರು.

05. ದಿನಾಂಕ:20.03.2020 ರಂದು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಶೂನ್ಯ ವೇಳೆ ಪ್ರಸ್ತಾವನೆಗೆ ನೀಡಿದ ಉತ್ತರವನ್ನು ವಿರೋಧಿಸಿ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ಧರಣಿ ನಡೆಸಿದರು.

06. ದಿನಾಂಕ:20.03.2020 ಮತ್ತು 23.03.2020 ರಂದು ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಮಂಡ್ಯ ಜಿಲ್ಲೆಯಲ್ಲಿ ಪರವಾನಗಿ ಪಡೆಯದೆ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಅಕ್ರಮ ಸಾಗಾಣಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ಬಗ್ಗೆ ನೀಡಿದ ಉತ್ತರದಿಂದ ತೃಪ್ತರಾಗದ ಕಾರಣ ಮಾನ್ಯ ಸದಸ್ಯರು ಧರಣಿ ನಡೆಸಿದರು.

ದಿನಾಂಕ:23.03.2020 ಮತ್ತು 24.03.2020 ರಂದು ವಿದ್ಯಾರ್ಥಿಗಳಿಗೆ ನೀಡಿರುವ ಲ್ಯಾಪ್ ಟ್ಯಾಪ್‌ಗಳ ಖರೀದಿಯಲ್ಲಿ ಅವ್ಯವಹಾರದ ಬಗ್ಗೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ನೀಡಿದ ಉತ್ತರದಿಂದ ತೃಪ್ತರಾಗದ ಕಾರಣ ಮಾನ್ಯ ಸದಸ್ಯರು ಧರಣಿ ನಡೆಸಿದರು.

## 27. ಸಭಾತ್ಯಾಗ

ನಿಯಮ 68ರಡಿಯಲ್ಲಿ ಪ್ರಸ್ತಾಪಿಸಲಾಗಿದ್ದ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ ರಾಜ್ಯ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವ ಬಗ್ಗೆ ಮಾನ್ಯ ಗೃಹ ಸಚಿವರು ನೀಡಿದ ಉತ್ತರವನ್ನು ವಿರೋಧಿಸಿ ಮಾನ್ಯ ವಿರೋಧ ಪಕ್ಷದ ನಾಯಕರುಗಳು ಸಭಾತ್ಯಾಗ ಮಾಡಿದರು.

## 28.ಅಧಿವೇಶನ ಮುಂದೂಡಿಕೆ

ದಿನಾಂಕ:17.02.2020ರಂದು ಪ್ರಾರಂಭಗೊಂಡ ವಿಧಾನ ಪರಿಷತ್ತಿನ 140ನೆಯ ಅಧಿವೇಶನವನ್ನು ದಿನಾಂಕ:24.03.2020 ರಂದು ಅನಿರ್ದಿಷ್ಟಕಾಲದವರೆಗೆ ಮುಂದೂಡಲಾಯಿತು.

## ವಿವರಣಾ ಪಟ್ಟಿ –1

| ಕ್ರಮ ಸಂಖ್ಯೆ | ಅಧಿವೇಶನ ನಡೆದ ದಿನಾಂಕ | ಪ್ರಾರಂಭಗೊಂಡ ಸಮಯ | ಅಂತ್ಯಗೊಂಡ ಸಮಯ | ಒಟ್ಟು ಸಮಯ |
|---|---|---|---|---|
| 01. | 17.02.2020 | ಮಧ್ಯಾಹ್ನ:12.08 | ಮ:1.08 | 01.00 |
| 02. | 18.02.2020 | ಬೆ:10.55<br>ಮ:2.52<br>ಸ:5.45 | ಮ:1.26<br>ಸ:4.55<br>ಸ:6.58 | 02.30<br>02.03<br>01.13 |
| 03. | 19.02.2020 | ಬೆ:11.15<br>ಮ:3.30<br>ಸ:05.13 | ಮ:1.40<br>ಮ:4.26<br>ಸ:06.07 | 02.25.<br>00.56<br>00.54 |
| 04. | 20.02.2020 | ಬೆ:11.22<br>ಮ:2.32 | ಮ:12.55<br>ಸ:6.45 | 01.33<br>04.13 |
| 05. | 02.03.2020 | ಬೆ:11.18<br>ಮ:1.10<br>ಮ:04.10 | ಬೆ:11.50<br>ಮ:01.23<br>ಸ:4.13 | 00.32<br>00.13<br>00.03 |
| 06. | 03.03.2020 | ಬೆ:11.38<br>ಸ:4.18 | ಮ:01.10<br>ಸ:4.37 | 01.32<br>00.19 |
| 07. | 04.03.2020 | ಬೆ:11.48<br>ಮ:3.30 | ಮ:2.26<br>ರಾ:07.00 | 02.38<br>03.30 |
| 08. | 05.03.2020 | ಮ:01.05 | ಮ:01.15 | 00.10 |
| 09. | 06.03.2020 | ಬೆ:10.47 | ಮ:03.15 | 04.18 |
| 10. | 09.03.2020 | ಬೆ:11.13<br>ಮ:03.02 | ಮ:2.13<br>ರಾ:07.25 | 03.00<br>04.23 |
| 11. | 10.03.2020 | ಬೆ:11.05<br>ಮ:03.10 | ಮ:01.57<br>ರಾ:08.04 | 02.52<br>04.54 |
| 12. | 11.03.2020 | ಬೆ:11.18<br>ಮ:03.18 | ಮ:02.08<br>ರಾ:07.33 | 01.50<br>04.15 |
| 13. | 12.03.2020 | ಬೆ:11.25<br>ಮ:03.15 | ಮ:02.03<br>ಸ:06.38 | 02.38<br>03.23 |
| 14. | 13.03.2020 | ಬೆ:10.34 | ಸ:04.13 | 05.39 |
| 15. | 16.03.2020 | ಬೆ:11.12<br>ಮ:03.17 | ಮ:02.16<br>ರಾ:08.20 | 03.04<br>05.03 |
| 16. | 17.03.2020 | ಬೆ:11.23<br>ಮ:03.00 | ಮ:02.05<br>ರಾ:08.17 | 02.42<br>05.17 |
| 17. | 18.03.2020 | ಬೆ:11.18<br>ಮ:03.17 | ಮ:01.25<br>ರಾ:09.40 | 02.07<br>06.23 |
| 18. | 19.03.2020 | ಬೆ:10.40 | ಮ:01.23 | 02.43 |

| | | | | |
|---|---|---|---|---|
| | | ಮ:02.34 | ರಾ:08.12 | 05.38 |
| 19. | 20.03.2020 | ಬೆ:10.34<br>ಮ:02.15<br>ಮ:03.24 | ಮ:01.18<br>ಮ:02.30<br>ಸ:05.50 | 02.44<br>00.15<br>02.26 |
| 20. | 23.03.2020 | ಬೆ:11.13<br>ಮ:04.10<br>ರಾ:07.50 | ಮ:02.31<br>ರಾ:08.39 | 03.18<br>03.40<br>00.06 |
| 21. | 24.03.2020 | ಬೆ:11.03<br>ಬೆ:11.40<br>ಮ:01.18<br>ಮ:02.41 | ಬೆ:11.05<br>ಬೆ:11.47<br>ಮ:02.05<br>ಮ:03.10 | 00.06<br>00.07<br>00.47<br>00.29 |

## ವಿವರಣಾ ಪಟ್ಟಿ–2

## ಕಾರ್ಯದರ್ಶಿಯವರ ವರದಿ
## ಘನತೆವೆತ್ತ ರಾಷ್ಟ್ರಪತಿಮತ್ತು ರಾಜ್ಯಪಾಲರಿಂದ ಒಪ್ಪಿಗೆ ಪಡೆದಿರುವ ವಿಧೇಯಕಗಳ ಪಟ್ಟಿ

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 01. | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2020 | 18.03.2020 | ರಾಷ್ಟ್ರಪತಿಯವರು |
| 02. | ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2020 | 19.03.2020 | ರಾಷ್ಟ್ರಪತಿಯವರು |
| 03. | ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕ, 2020 | 20.03.2020 | ರಾಜ್ಯಪಾಲರು |
| 04. | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2020 | 23.03.2020 | ರಾಜ್ಯಪಾಲರು |
| 05. | ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕ, 2020 | 23.03.2020 | ರಾಜ್ಯಪಾಲರು |
| 06 | ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ | 23.03.2020 | ರಾಜ್ಯಪಾಲರು |
| 07. | ಕರ್ನಾಟಕ ರಾಜಭಾಷಾ (ತಿದ್ದುಪಡಿ) ವಿಧೇಯಕ, 2020 | 23.03.2020 | ರಾಜ್ಯಪಾಲರು |
| 08. | ಕರ್ನಾಟ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ | 23.03.2020 | ರಾಜ್ಯಪಾಲರು |
| 09. | ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2020 | 23.03.2020 | ರಾಜ್ಯಪಾಲರು |

| | | | |
|---|---|---|---|
| 10. | ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕ,2020 | 23.03.2020 | ರಾಜ್ಯಪಾಲರು |
| 11. | ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ)ವಿಧೇಯಕ, 2020 | 23.03.2020 | ರಾಜ್ಯಪಾಲರು |
| 12. | ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿಬಂದಿಸುವ) ತಿದ್ದುಪಡಿ ವಿಧೇಯಕ, 2020 | 23.03.2020 | ರಾಜ್ಯಪಾಲರು |
| 13. | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ)) ವಿಧೇಯಕ, 2020 | 23.03.2020 | ರಾಜ್ಯಪಾಲರು |
| 14. | ಕರ್ನಾಟಕ ಧನವಿನಿಯೋಗ ವಿಧೇಯಕ, 2020 | 24.03.2020 | ರಾಜ್ಯಪಾಲರು |
| 15. | ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕ, 2020 | 24.03.2020 | ರಾಜ್ಯಪಾಲರು |
| 16. | ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2020 | 24.03.2020 | ರಾಜ್ಯಪಾಲರು |

## ವಿವರಣಾ ಪಟ್ಟಿ –3

## ಶೂನ್ಯವೇಳೆ ಪ್ರಸ್ತಾವನೆಗಳು

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ/ಶ್ರೀಯುತರುಗಳ ಾದ: | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 1 | ಶ್ರೀ ಲಹರ್‌ಸಿಂಗ್ ಸಿರೋಯಾ | 04.03.2020 | ಕೊರೋನಾ ವೈರಸ್ ಖಾಯಿಲೆ ಹರಡುತ್ತಿರುವ ಬಗ್ಗೆ | ಮಾನ್ಯ ಸಭಾನಾಯಕರು, ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 2 | ಡಾ: ವೈ.ಎ. ನಾರಾಯಣಸ್ವಾಮಿ | 04.03.2020 | ನ್ಯಾಯಬೆಲೆ ಅಂಗಡಿಗಳಲ್ಲಿ ಅರ್ಹ ಫಲಾನುಭವಿಗಳಿಗೆ ನ್ಯಾಯಯುತವಾಗಿ ಸಿಗಬೇಕಾದ ಪಡಿತರ ಆಹಾರ ಧಾನ್ಯಗಳು ಹಂಚಿಕೆಯಾಗದಿರುವ ಬಗ್ಗೆ | ಮಾನ್ಯ ಸಭಾನಾಯಕರು, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು 13.03.2020 ರಂದು ಉತ್ತರ ಮಂಡಿಸಲಾಯಿತು |

| | | | | |
|---|---|---|---|---|
| 3 | ಐವನ್ ಡಿ'ಸೋಜಾ | 04.03.2020 | ರಿಕ್ಷಾ ಚಾಲಕರು ತಮ್ಮ ರಿಕ್ಷಾಗಳನ್ನು ಮಾರಾಟ ಮಾಡಲು ಅಥವಾ ವರ್ಗಾವಣೆ ಮಾಡಲು ತೊಂದರೆಯಾಗುತ್ತಿರುವ ಬಗ್ಗೆ | 08.03.2020 ಉತ್ತರ ಮಂಡಿಸಲಾಯಿತು |
| 4 | ಕೆ.ಟಿ. ಶ್ರೀಕಂಠೇಗೌಡ | 04.03.2020 | ಮಂಡ್ಯ ಜಿಲ್ಲೆಯ ರೈತರು ಹೊಸ ತಳಿಯ ಭತ್ತ ಬಿತ್ತನೆ ಮಾಡಿ ಬೆಳೆ ನಷ್ಟವಾಗಿರುವ ಬಗ್ಗೆ | ಮಾನ್ಯ ಸಭಾನಾಯಕರು, ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 5 | ಶ್ರೀಕಾಂತ ಲಕ್ಷ್ಮಣ ಘೋಟ್ನೇಕರ್ | 06.03.2020 | "ಜೋಯಿಡಾ ತಾಲ್ಲೂಕಿನಲ್ಲಿ ಸಿವಿಲ್ ನ್ಯಾಯಾಲಯ ಸ್ಥಾಪನೆ" ಮಾಡುವ ಕುರಿತು | ದಿನಾಂಕ: 19.03.2020ರಂದು ಉತ್ತರ ಮಂಡಿಸಲಾಯಿತು |
| 6 | ಯು.ಬಿ. ವೆಂಕಟೇಶ್ | 06.03.2020 | "ಪತ್ರಿಕಾ ಸಂಸ್ಥೆಯಲ್ಲಿನ ಹಾಲಿ ಮತ್ತು ನಿವೃತ್ತ ಪತ್ರಕರ್ತರಿಗೆ ರಾಜ್ಯ ಸರ್ಕಾರ ವಿಶ್ರಾಂತಿ ವೇತನ, ಇತ್ಯಾದಿ ಸೌಲಭ್ಯ ನೀಡಿದಂತೆ ಸಂಪಾದಕೀಯ ವಿಭಾಗದ ಉದ್ಯೋಗಿಗಳಿಗೂ ಸರ್ಕಾರದಿಂದ ಸವಲತ್ತು"ಗಳನ್ನು ಮಂಜೂರು ಮಾಡುವ ಬಗ್ಗೆ | ದಿನಾಂಕ:06.03.2020 ರಂದು ಉತ್ತರ ಮಂಡಿಸಲಾಯಿತು. |
| 7 | ಡಾ: ವೈ.ಎ. ನಾರಾಯಣಸ್ವಾಮಿ | 09.03.2020 | ರಾಜ್ಯದ ನದಿಪಾತ್ರಗಳಲ್ಲಿ ಅವ್ಯಾಹತವಾಗಿ ಮರಳು ಗಣಿಗಾರಿಕೆ ನಡೆಸುತ್ತಿರುವುದರಿಂದ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ | ದಿನಾಂಕ:09.03.2020 ರಂದು ಉತ್ತರ ಮಂಡಿಸಲಾಯಿತು. |
| 8 | ಎಂ.ಪಿ. ಸುನೀಲ್ ಸುಬ್ರಮಣಿ | 09.03.2020 | ಕೊಡಗು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಹೊರ ರಾಜ್ಯದ ಕಸ ಸುರಿಕ್ಷಾ ಚಾಲಕರು ತಮ್ಮ ರಿಕ್ಷಾಗಳನ್ನು ಮಾರಾಟ ಮಾಡಲು ಅಥವಾ ವರ್ಗಾವಣೆ ಮಾಡಲು ತೊಂದರೆಯಾಗುತ್ತಿರುವ ಬಗ್ಗೆ | ದಿನಾಂಕ:16.03.2020 ರಂದು ಉತ್ತರ ಮಂಡಿಸಿದರು |
| 9 | ಕೆ.ಟಿ. ಶ್ರೀಕಂಠೇಗೌಡ | 09.03.2020 | ಬೇಸಿಗೆ ಕಾಲ ಪ್ರಾರಂಭವಾಗುತ್ತಿದ್ದು ರೈತರಿಗೆ 3 ಫೇಸ್ ವಿದ್ಯುತ್ ಲಭ್ಯವಿಲ್ಲದೆ ತೊಂದರೆಗೆ ಒಳಗಾಗಿರುವ ಬಗ್ಗೆ | ದಿನಾಂಕ:09.03.2020 ರಂದು ಉತ್ತರ ಮಂಡಿಸಲಾಯಿತು. |

| | | | | |
|---|---|---|---|---|
| 10 | ಡಾ: ವೈ.ಎ. ನಾರಾಯಣಸ್ವಾಮಿ ಮತ್ತು ಶ್ರೀ ಆರ್. ಪ್ರಸನ್ನಕುಮಾರ್ | 10.03.2020 | ವಿಶ್ವವಿದ್ಯಾಲಯ ಮತ್ತು ಸರ್ಕಾರಿ ಕಾಲೇಜುಗಳಲ್ಲಿ ಗ್ರಂಥಪಾಲಕರ ಹುದ್ದೆಗೆ ನೇಮಕಾತಿ ಮಾಡಿಲ್ಲದಿರುವ ಕುರಿತು | ದಿನಾಂಕ:13.03.2020 ರಂದು ಉತ್ತರ ಮಂಡಿಸಿದರು |
| 11 | ಕೆ.ಟಿ. ಶ್ರೀಕಂಠೇಗೌಡ | 13.03.2020 | ಮದ್ದೂರು ತಾಲ್ಲೂಕು ಕೊಪ್ಪ ಪೊಲೀಸ್ ಠಾಣೆಯ ಪಿ.ಎಸ್.ಐ. ಇವರು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಬಗ್ಗೆ | ದಿನಾಂಕ:13.03.2020 ರಂದು ಉತ್ತರ ಮಂಡಿಸಿದರು |
| 12 | ವಿಜಯ್‌ಸಿಂಗ್ ಪರವಾಗಿ ಅರವಿಂದಕುಮಾರ್ ಅರಳಿ | 10.03.2020 | ಕುಟುಂಬ ಪಡಿತರ ಚೀಟಿ ವಿತರಣೆ ಸಂಬಂಧ ಜಾರಿಗೆ ತಂದಿರುವ ಹೆಬ್ಬೆಟ್ಟು ಗುರುತಿನ ಕಾರ್ಯವನ್ನು 3 ತಿಂಗಳುಗಳ ಕಾಲ ವಿಸ್ತರಿಸುವುದರ ಜೊತೆಗೆ, ರಾಜ್ಯದ ಎಲ್ಲಾ ಸ್ಥಳಗಳಲ್ಲಿಯೂ ಹೆಬ್ಬೆಟ್ಟು ಗುರುತನ್ನು ಪಡೆಯುವ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ | ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಉತ್ತರಿಸಿದರು. |
| 13 | ಬಸವರಾಜ ಶಿವಲಿಂಗಪ್ಪ ಹೊರಟ್ಟಿ | 10.03.2020 | ಆಸಾಮಿ ಸಾಲವನ್ನು ಕೃಷಿ ಸಾಲವೆಂದು ಪರಿಗಣಿಸಿ ಸಾಲ ಮನ್ನಾ ಮಾಡುವ ಕುರಿತು | ಮಾನ್ಯ ಸಹಕಾರ ಸಚಿವರು ಉತ್ತರಿಸಿದರು |
| 14 | ಪಿ.ಆರ್. ರಮೇಶ್ | 10.03.2020 | ಬೆಂಗಳೂರು ನಗರದಲ್ಲಿ ಕೃಷಿಕರ ಜಮೀನುಗಳನ್ನು ಕಾನೂನುಬಾಹಿರವಾಗಿ ಪೊಲೀಸ್ ಇಲಾಖೆ ಸಹಾಯದಿಂದ ಆಕ್ರಮಿಸಿಕೊಳ್ಳುತ್ತಿರುವ ಬಗ್ಗೆ | ದಿನಾಂಕ:16.03.2020 ರಂದು ಉತ್ತರ ಮಂಡಿಸಿದರು |
| 15 | ಬಸವರಾಜ ಶಿವಲಿಂಗಪ್ಪ ಹೊರಟ್ಟಿ | 11.03.2020 | ಪದವಿ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ದೈಹಿಕ ಉಪನ್ಯಾಸಕರ ನೇಮಕಾತಿ ಬಗ್ಗೆ | ದಿನಾಂಕ:13.03.2020 ರಂದು ಉತ್ತರ ಮಂಡಿಸಿದರು |
| 16 | ಡಾ: ವೈ.ಎ.ನಾರಾಯಣಸ್ವಾಮಿ | 11.03.2020 | ರೈತರ ಜಮೀನಿನಲ್ಲಿ ಸಸಿಗಳನ್ನು ಬೆಳೆಸುವ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಪ್ರೋತ್ಸಾಹಧನ ನೀಡದಿರುವ ಬಗ್ಗೆ | ಮಾನ್ಯ ಸಭಾನಾಯಕರು, ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 17 | ಪ್ರಕಾಶ್ ಕೆ. ರಾಥೋಡ್ | 11.03.2020 | ವಿಜಯಪುರ ಜಿಲ್ಲೆಯ ರಾಜೇಶ್ವರಿ ಗಾಯಕ್‌ವಾಡ್‌ರವರಿಗೆ ಸರ್ಕಾರ ಮತ್ತು ವಿಜಯಪುರ ಮಹಾನಗರ ಪಾಲಿಕೆಯವರು ಘೋಷಣೆ | ದಿನಾಂಕ:13.03.2020 ರಂದು ಉತ್ತರ ಮಂಡಿಸಿದರು |

| | | | | |
|---|---|---|---|---|
| | | | ಮಾಡಿದಂತೆ ರೂ.25.00 ಲಕ್ಷಗಳನ್ನು ಮತ್ತು ನಿವೇಶನವನ್ನು ನೀಡದಿರುವ ಬಗ್ಗೆ | |
| 18 | ಅರವಿಂದ ಕುಮಾರ್ ಅರಳಿ | 12.03.2020 | ಕಲಬುರಗಿ ನಗರದಲ್ಲಿ ಕೊರೋನಾ ವೈರಸ್ ಖಾಯಿಲೆಯಿಂದ ವ್ಯಕ್ತಿಯೊಬ್ಬರು ಸಾವನ್ನಪ್ಪಿರುವುದರಿಂದ ಜಿಲ್ಲೆಯಲ್ಲಿ ಪ್ರಯೋಗಾಲಯವನ್ನು ಆರಂಭಿಸಬೇಕೆಂದು ಪ್ರಸ್ತಾಪಿಸಿದರು. | ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 19 | ಶ್ರೀಕಾಂತ್ ಲಕ್ಷ್ಮಣ್ ಘೋಟ್ನೇಕರ್ | 12.03.2020 | ಕಾರವಾರ ಜಿಲ್ಲೆಯಲ್ಲಿ ಬೆಳೆದ ಈರುಳ್ಳಿ ಬೆಳೆ ಕೀಟಭಾದೆಯಿಂದ ನಾಶವಾಗಿದ್ದು, ರೈತರಿಗೆ ಬೆಳೆ ಪರಿಹಾರ ನೀಡುವ ಬಗ್ಗೆ | ದಿನಾಂಕ:13.03.2020 ರಂದು ಉತ್ತರ ಮಂಡಿಸಿದರು. |
| 20 | ಡಾ: ಜಯಮಾಲ ರಾಮಚಂದ್ರ | 12.03.2020 | ಮುಜರಾಯಿ ಇಲಾಖೆಯಿಂದ ಕೈಗೊಂಡಿರುವ ಸಾಮೂಹಿಕ ವಿವಾಹ ಕುರಿತು | ದಿನಾಂಕ:16.03.2020 ರಂದು ಉತ್ತರ ಮಂಡಿಸಿದರು. |
| 21 | ತಿಪ್ಪಣ್ಣ ಕಮಕನೂರ | 12.03.2020 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್ ವಾರ್ಡನ್‌ಗಳಿಂದ ವಿಸ್ತರಣಾಧಿಕಾರಿಗಳು ಹಣ ವಸೂಲಿ ಮಾಡುತ್ತಿರುವ ಬಗ್ಗೆ | ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 22 | ಟಿ.ಎ. ಶರವಣ | 12.03.2020 | ಬೆಂಗಳೂರು ನಗರದಲ್ಲಿ ಒಣಗಿದ ಮರಗಳ ಅಪಾಯಕಾರಿ ರೆಂಬೆಗಳನ್ನು ಕತ್ತರಿಸುವ ಬಗ್ಗೆ | ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 23 | ಪಿ.ಆರ್. ರಮೇಶ್ | 13.03.2020 | ಬೆಂಗಳೂರು ನಗರದಲ್ಲಿ ಕೊರೋನಾ ವೈರಸ್ ಹರಡುತ್ತಿರುವ ಹಿನ್ನಲೆಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ | ದಿನಾಂಕ:16.03.2020 ರಂದು ಉತ್ತರ ಮಂಡಿಸಿದರು. |

| | | | | |
|---|---|---|---|---|
| 24 | ಎಂ.ಎ. ಗೋಪಾಲಸ್ವಾಮಿ | 13.03.2020 | ಹಾಸನ ನಗರದಲ್ಲಿ ರೈಲ್ವೆ ಗೇಟ್ ಬಳಿ ನಿರ್ಮಿಸಲಾಗುತ್ತಿದ್ದ ಮೇಲ್ಸೇತುವೆ ಕುಸಿದಿದ್ದು, ಕಳಪೆ ಕಾಮಗಾರಿ ಮಾಡಿರುವ ಗುತ್ತಿಗೆದಾರರು ಮತ್ತು ಗುಣಮಟ್ಟ ಪರಿಶೀಲಿಸದ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳುವ ಬಗ್ಗೆ | ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು ಉತ್ತರಿಸಿದರು. |
| 25 | ಬಸವರಾಜ ಶಿವಲಿಂಗಪ್ಪ ಹೊರಟ್ಟಿ | 13.03.2020 | ಗೋವಾ ನಗರದಲ್ಲಿ ನಾಲ್ಕು ದಶಕಗಳಿಂದ ವಾಸವಾಗಿರುವ ಕನ್ನಡಿಗರನ್ನು ವಲಸಿಗರೆಂದು ಪೋಗೋ ಹೆಸರಿನಲ್ಲಿ ಹೊರದಬ್ಬುತ್ತಿರುವ ಬಗ್ಗೆ | ದಿನಾಂಕ:18.03.2020 ರಂದು ಉತ್ತರವನ್ನು ಮಂಡಿಸಿದರು |
| 26 | ಕಾಂತರಾಜು (ಬಿ.ಎಂ.ಎಲ್) ಹೆಚ್.ಎಂ.ರಮೇಶ್‌ಗೌಡ, ಕೆ.ಟಿ.ಶ್ರೀಕಂಠೇಗೌಡ, ಕೆ.ಎ. ತಿಪ್ಪೇಸ್ವಾಮಿ | 16.03.2020 | ಕೆ.ಆರ್.ಪೇಟೆ ಪುರಸಭೆಯ 17ನೇ ವಾರ್ಡಿನ ಪುರಸಭಾ ಸದಸ್ಯರು ತಮ್ಮ ವಾರ್ಡಿನ ವ್ಯಾಪ್ತಿಯಲ್ಲಿ ಬರುವ ಡ್ರೈನೇಜ್ ಕಾಮಗಾರಿ ಮಾಡಿಸಿ ಹಿಂದಿರುಗಿದ ನಂತರ ಪುರಸಭೆ ಮುಖ್ಯಾಧಿಕಾರಿಯವರು ಮುಚ್ಚಿ ಹಾಕಿರುವ ಕುರಿತು ಕೆ.ಆರ್.ಪೇಟೆ ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಹೋದ ಸಂದರ್ಭದಲ್ಲಿ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್‌ರವರು ಸ್ಥಳೀಯ ಶಾಸಕರ ಕುಮ್ಮಕ್ಕಿನಿಂದ ಪುರಸಭಾ ಸದಸ್ಯರ ಮೇಲೆಯೇ ಎಫ್.ಐ.ಆರ್ ದಾಖಲಿಸಿರುವ ಬಗ್ಗೆ | ಮಾನ್ಯ ಸಭಾನಾಯಕರು, ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 27 | ಲಹರ್‌ಸಿಂಗ್ ಸಿರೋಯಾ | 16.03.2020 | ಬೆಂಗಳೂರು ನಗರದ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಗರ್ಭಿಣಿ ಮಹಿಳೆಯ ಮೇಲೆ 5 ಜನರ ಗುಂಪು ಹಲ್ಲೆ ನಡೆಸಿರುವ ಬಗ್ಗೆ | ದಿನಾಂಕ:20.03.2020 ರಂದು ಉತ್ತರವನ್ನು ಮಂಡಿಸಿದರು |
| 28 | ಎಂ.ಎ. ಗೋಪಾಲಸ್ವಾಮಿ | 16.03.2020 | ಚನ್ನರಾಯಪಟ್ಟಣ ತಾಲ್ಲೂಕು ಶ್ರೀನಿವಾಸಪುರದಲ್ಲಿರುವ ಹೇಮಾವತಿ ಸಕ್ಕರೆ ಕಾರ್ಖಾನೆಯ ಬಾಯ್ಲರ್ ಡಸ್ಟ್ ಕ್ಯಾಟಲ್ ಸ್ಫೋಟಗೊಂಡು ಆಗಿರುವ ಅನಾಹುತ ಕುರಿತು | ದಿನಾಂಕ:17.03.2020 ರಂದು ಉತ್ತರವನ್ನು ಮಂಡಿಸಿದರು |

| | | | | |
|---|---|---|---|---|
| 29 | ಎಂ.ನಾರಾಯಣಸ್ವಾಮಿ | 17.03.2020 | ಅಡುಗೆ ಎಣ್ಣೆಗೆ ವಿವಿಧ ರಾಸಾಯನಿಕ ಅಂಶಗಳನ್ನು ಹೊಂದಿರುವ ಮಿನರಲ್ ಆಯಿಲ್ ಹಾಗೂ ಇನ್ನಿತರೆ ಕಳಪೆ ದರ್ಜೆಯ ವಸ್ತುಗಳನ್ನು ಬೆರಸಲಾಗುತ್ತಿರುವ ಬಗ್ಗೆ | ದಿನಾಂಕ:17.03.2020 ರಂದು ಉತ್ತರವನ್ನು ಮಂಡಿಸಿದರು |
| 30 | ಎನ್. ಅಪ್ಪಾಜಿಗೌಡ | 17.03.2020 | ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ದೇವಲಾಪುರ ಹೋಬಳಿಯ ಮಲ್ಲಸಂದ್ರ ಕಾವಲ್ ಬಳಿ ಸರ್ವೆ ನಂ.11/5ರ 5 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಬೆಳೆದ ಬೆಳೆಯನ್ನು ತೋಟಗಾರಿಕೆ ಇಲಾಖಾಧಿಕಾರಿಗಳು ನಿಯಮ ಮೀರಿ ನಾಶ ಮಾಡಿರುವ ಬಗ್ಗೆ | ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು ಉತ್ತರವನ್ನು ಮಂಡಿಸಿದರು |
| 31 | ನಿರಾಣಿ ಹಣಮಂತ ರುದ್ರಪ್ಪ | 17.03.2020 | ಬಾಗಲಕೋಟೆ ಜಿಲ್ಲೆಯಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿನ ಸಮಸ್ಯೆಗಳ ಕುರಿತು | ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು ಉತ್ತರವನ್ನು ಮಂಡಿಸಿದರು |
| 32 | ಡಾ: ವೈ.ಎ.ನಾರಾಯಣಸ್ವಾಮಿ | 17.03.2020 | ರಾಜ್ಯದಲ್ಲಿ ಹಕ್ಕಿಜ್ವರ ಹರಡುತ್ತಿರುವ ಬಗ್ಗೆ | ದಿನಾಂಕ:18.03.2020 ರಂದು ಉತ್ತರವನ್ನು ಮಂಡಿಸಿದರು |
| 33 | ಎಸ್.ವ್ಹಿ.ಸಂಕನೂರ | 17.03.2020 | ಗದಗ ಜಿಲ್ಲೆ ಕಪ್ಪತಗುಡ್ಡ ಅರಣ್ಯ ಪ್ರದೇಶಕ್ಕೆ ಬೆಂಕಿ ತಗುಲಿ 50 ಹೆಕ್ಟೇರ್ ಅರಣ್ಯ ಪ್ರದೇಶ ನಾಶವಾಗಿರುವ ಬಗ್ಗೆ | ಮಾನ್ಯ ಸಭಾನಾಯಕರು ಉತ್ತರವನ್ನು ಮಂಡಿಸಿದರು. |
| 34 | ಎಂ.ನಾರಾಯಣಸ್ವಾಮಿ | 17.03.2020 | ರಾಜ್ಯದ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಮಂಜೂರಾದ ಹುದ್ದೆಗಳನ್ನು ಭರ್ತಿ ಮಾಡದೆ ಇರುವುದು ಹಾಗೂ ತಂತ್ರಾಂಶ ಅಪ್‌ಡೇಟ್ ಇಲ್ಲದೆ ಕಚೇರಿ ಸೇವೆಗಳ ವಿಳಂಬದಿಂದ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿರುವ ಕುರಿತು | ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಉತ್ತರವನ್ನು ಮಂಡಿಸಿದರು. |

| | | | | |
|---|---|---|---|---|
| 35 | ಮರಿತಿಬ್ಬೇಗೌಡ ಮತ್ತು ಶ್ರೀ ಕೆ.ಟಿ. ಶ್ರೀಕಂಠೇಗೌಡ | 18.03.2020 | ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಳೆದ 10 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಡಾಟಾ ಎಂಟ್ರಿ ಆಪರೇಟರ್ ಮತ್ತು ಡಿ' ಗುಂಪಿನ 416 ಸಿಬ್ಬಂದಿಗಳ ಸೇವೆಯನ್ನು ಸ್ಥಗಿತಗೊಳಿಸುತ್ತಿರುವ ಬಗ್ಗೆ | ದಿನಾಂಕ:19.03.2020 ರಂದು ಉತ್ತರವನ್ನು ಮಂಡಿಸಿದರು. |
| 36 | ನಿರಾಣಿ ಹಣಮಂತ ರುದ್ರಪ್ಪ | 18.03.2020 | ಕಾಳಿ ನದಿಯನ್ನು ಮಲಪ್ರಭ ಮತ್ತು ಘಟಪ್ರಭ ನದಿಗಳಿಗೆ ಜೋಡಣೆ ಮಾಡುವ ಬಗ್ಗೆ | ಮಾನ್ಯ ಸಭಾನಾಯಕರು, ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 37 | ಹೆಚ್.ಎಂ. ರೇವಣ್ಣ | 18.03.2020 | ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಹೊಸಕೋಟೆ ತಹಶೀಲ್ದಾರ್ ನಿರ್ಬಂಧ ವಿಧಿಸಿರುವುದರಿಂದ ವೈದೇಹಿ ಆಸ್ಪತ್ರೆಯ ರೋಗಿಗಳಿಗೆ ತೊಂದರೆಯುಂಟಾಗಿರುವ ಬಗ್ಗೆ | ಮಾನ್ಯ ಕಂದಾಯ ಸಚಿವರು<br>ಮಾನ್ಯ ಸಭಾನಾಯಕರು, ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 38 | ಐವನ್ ಡಿ'ಸೋಜಾ | 19.03.2020 | ಕೊರೊನಾ ಸೋಂಕಿನ ತಪ್ಪು ತಿಳುವಳಿಕೆಯಿಂದ ಕೋಳಿ ಸಾಕಾಣಿಕೆದಾರರು ಮತ್ತು ಉದ್ದಿಮೆದಾರರು ಭಾರಿ ನಷ್ಟವನ್ನು ಅನುಭವಿಸುತ್ತಿರುವ ಕುರಿತು | ಮಾನ್ಯ ಪಶುಸಂಗೋಪನಾ ಮತ್ತು ಹಜ್ ಮತ್ತು ವಕ್ಫ್‌ಸಚಿವರು ಉತ್ತರಿಸಿದರು. |
| 39 | ಹೆಚ್.ಎಂ.ರೇವಣ್ಣ | 19.03.2020 | ರೇಷ್ಮೆ ಬಿತ್ತನೆ ವಲಯಕ್ಕೆ ಅನುದಾನ ಮತ್ತು ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವ ಬಗ್ಗೆ | ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು |
| 40 | ಮರಿತಿಬ್ಬೇಗೌಡ | 20.03.2020 | ಡಿಪ್ಲೋಮಾ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ನೀಡುತ್ತಿರುವ ಸಂಭಾವನೆಯನ್ನು ಪರಿಷ್ಕರಿಸುವ ಕುರಿತು | ದಿನಾಂಕ:24.03.2020 ರಂದು ಉತ್ತರವನ್ನು ಮಂಡಿಸಿದರು |

| | | | | |
|---|---|---|---|---|
| 41 | ಕೆ.ಟಿ. ಶ್ರೀಕಂಠೇಗೌಡ | 20.03.2020 | ಮಂಡ್ಯ ಜಿಲ್ಲೆಯಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿ ವೃದ್ಧರು, ವಿಧವೆಯರು ಮತ್ತು ಅಂಗವಿಕಲರಿಗೆ ನೀಡಲಾಗುತ್ತಿದ್ದ ಮಾಸಾಶನ ಸ್ಥಗಿತಗೊಂಡಿರುವ ಬಗ್ಗೆ | ದಿನಾಂಕ:24.03.2020 ರಂದು ಉತ್ತರವನ್ನು ಮಂಡಿಸಿದರು |
| 42 | ನಿರಾಣಿ ಹಣಮಂತ ರುದ್ರಪ್ಪ | 20.03.2020 | ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲ್ಲೂಕಿನ ಚಿಕ್ಕಸಂಗಮ ದೇವಾಲಯದ ನಡುಗಡ್ಡೆ ಪ್ರದೇಶದಲ್ಲಿ ಪಕ್ಷಿಧಾಮ ನಿರ್ಮಾಣ ಮಾಡಿ ಪಕ್ಷಿ ಸಂಕುಲ ರಕ್ಷಿಸುವುದರ ಕುರಿತು | ಮಾನ್ಯ ಸಭಾನಾಯಕರು, ಮಾನ್ಯ ಜಲಸಂಪನ್ಮೂಲ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 43 | ಪಿ.ಆರ್. ರಮೇಶ್ | 23.03.2020 | ಕೊರೋನಾ ವೈರಸ್‌ನಿಂದ ರಾಜ್ಯದ 9 ಜಿಲ್ಲೆಗಳನ್ನು ಲಾಕ್‌ಡೌನ್ ಮಾಡಿರುವ ಕುರಿತು | ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 44 | ಹೆಚ್.ಎಂ. ರೇವಣ್ಣ | 23.03.2020 | ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿನ ಸುರಗಜಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನಲ್ಲಿ ಇಲಿ ಚರ್ಮ, ಜಿರಳೆ ಹಾಗೂ ಕಂಬಳಿಹುಳುಗಳು ಬಂದಿರುವ ಬಗ್ಗೆ | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಉತ್ತರಿಸಿದರು |

## ವಿವರಣಾ ಪಟ್ಟಿ – 4

## ಗಮನ ಸೆಳೆಯುವ ಸೂಚನೆಗಳು

| ಕ್ರ ಸಂ | ಸದಸ್ಯರ ಹೆಸರು <u>ಶ್ರೀಮತಿ/ ಶ್ರೀಯುತರುಗಳಾದ:</u> | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 1 | ಶ್ರೀ ತಿಪ್ಪಣ್ಣ ಕಮಕನೂರು | 16.03.2020 | ಅತ್ಯಂತ ಹಿಂದುಳಿದ ಕೋಲಿ, ಕಬ್ಬಲಿಗ ಹಾಗೂ ಇನ್ನಿತರ 39 ಪರ್ಯಾಯ ವರ್ಗದ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ | ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರಿಸಿದರು. |
| 2 | ಪಿ.ಆರ್.ರಮೇಶ್, ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಮರಿತಿಬ್ಬೇಗೌಡ, ಕೆ.ಟಿ. ಶ್ರೀಕಂಠೇಗೌಡ, ಆರ್. ಚೌಡರೆಡ್ಡಿ ತೂಪಲ್ಲಿ ಹಾಗೂ ಎನ್.ಅಪ್ಪಾಜಿಗೌಡ | 17.03.2020 | 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್‌ನ 362 ಹುದ್ದೆಗಳ ನೇಮಕಾತಿಯಲ್ಲಿ ಆಗಿರುವ ಅನ್ಯಾಯದ ಕುರಿತು | ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು. |

| | | | | |
|---|---|---|---|---|
| 3 | ಎಂ.ನಾರಾಯಣಸ್ವಾಮಿ | 17.03.2020 | ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನಧಿಕೃತವಾಗಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿರುವ ಕುರಿತು | ಮಾನ್ಯ ಕಂದಾಯ ಸಚಿವರು ಉತ್ತರಿಸಿದರು. |
| 4 | ಡಾ. ವೈ.ಎ.ನಾರಾಯಣಸ್ವಾಮಿ | 18.03.2020 | ರಾಜ್ಯ ಸರ್ಕಾರಿ ನೌಕರರಿಗೆ ವಸತಿ ಗೃಹ ಹಂಚಿಕೆ ಮಾಡುವ ಹಾಗೂ ಹಂಚಿಕೆಯಲ್ಲಿರುವ ನ್ಯೂನ್ಯತೆಗಳ ಕುರಿತು | ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಉತ್ತರಿಸಿದರು. |
| 5 | ಮರಿತಿಬ್ಬೇಗೌಡ, ಪುಟ್ಟಣ್ಣ ಹಾಗೂ ಮೋಹನ್‌ಕುಮಾರ್ ಕೊಂಡಜಿ | 19.03.2020 | ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಶಿವಾಜಿನಗರದಿಂದ ನಾಗವಾರದವರೆಗೆ ಕೈಗೊಂಡಿರುವ ಮೆಟ್ರೋ 2ನೇ ಹಂತದ ಕಾಮಗಾರಿಯ ಮಾರ್ಗ ನಿರ್ಮಾಣಕ್ಕೆ ಭೂಸ್ವಾಧಿನ ಪಡಿಸಿಕೊಂಡಿದ್ದು, ಗುತ್ತಿಗೆದಾರರು ಭೂಮಾಲೀಕರುಗಳಿಗೆ ಪರಿಹಾರ ನೀಡದಿರುವ ಬಗ್ಗೆ | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಉತ್ತರಿಸಿದರು. |
| 6 | ಕೆ.ಸಿ.ಕೊಂಡಯ್ಯ, ಎಸ್.ಆರ್. ಪಾಟೀಲ್(ಮಾನ್ಯ ವಿರೋಧ ಪಕ್ಷದ ನಾಯಕರು), ಎಂ.ನಾರಾಯಣಸ್ವಾಮಿ(ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು), ಬಸವರಾಜ ಶಿವಲಿಂಗಪ್ಪ ಹೊರಟ್ಟಿ | 23.03.2020 | ವಿದ್ಯಾರ್ಥಿಗಳಿಗೆ ವಿತರಿಸಿರುವ ಲ್ಯಾಪ್‌ಟಾಪ್‌ಗಳ ಖರೀದಿಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ | ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು. |

## ವಿವರಣಾ ಪಟ್ಟಿ 5
## ನಿಯಮ 330ಅಡಿ ಪ್ರಸ್ತಾವಗಳು

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ/ ಶ್ರೀಯುತರುಗಳಾದ: | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 1 | ಪಿ.ಆರ್.ರಮೇಶ್, ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಮರಿತಿಬ್ಬೇಗೌಡ, ಕೆ.ಟಿ. ಶ್ರೀಕಂಠೇಗೌಡ, ಆರ್. ಚೌಡರೆಡ್ಡಿ ತೂಪಲ್ಲಿ ಹಾಗೂ ಎನ್.ಅಪ್ಪಾಜಿಗೌಡ ಅವರುಗಳು | 17.03.2020 | 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್‌ನ 362 ಹುದ್ದೆಗಳ ನೇಮಕಾತಿಯಲ್ಲಿ ಆಗಿರುವ ಅನ್ಯಾಯದ ಕುರಿತು | ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು. |

| | | | | |
|---|---|---|---|---|
| 02. | ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಎಂ.ನಾರಾಯಣಸ್ವಾಮಿರವರು | 17.03.2020 | ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನಧಿಕೃತವಾಗಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿರುವ ಕುರಿತು | ಮಾನ್ಯ ಕಂದಾಯ ಸಚಿವರು ಉತ್ತರಿಸಿದರು |
| 03. | ಶ್ರೀ ಎಸ್.ಆರ್.ಪಾಟೀಲ್ ಹಾಗೂ ಕೆ.ಟಿ.ಶ್ರೀಕಂಠೇಗೌಡ | 19.03.2020 | ರಾಜ್ಯದಲ್ಲಿ ದಿನನಿತ್ಯ ಉಪಯೋಗಿಸುವ ಆಹಾರ ಪದಾರ್ಥಗಳಲ್ಲಿ ರಾಸಾಯನಿಕ ಮಿಶ್ರಿತ ಕಲಬೆರಕೆ ಹೆಚ್ಚಾಗಿ ಜನಸಾಮಾನ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವ ಬಗೆ | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಉತ್ತರಿಸಿದರು. |

## ವಿವರಣಾ ಪಟ್ಟಿ 6

## ನಿಯಮ 330ಎ ಅಡಿ ವಿಶೇಷ ಪ್ರಸ್ತಾವಗಳು

| ಕ್ರ ಸಂ | ಹೆಸರು | ದಿನಾಂಕ | ವಿಷಯ | ಷರಾ |
|---|---|---|---|---|
| 01. | ಶ್ರೀ ಬಸವರಾಜ ಹೊರಟ್ಟಿ ಹಾಗೂ ಶ್ರೀ ಐವನ್ ಡಿ'ಸೋಜಾ | 18.02.2020 | ಹುಬ್ಬಳ್ಳಿಯ ಕೆ.ಎಲ್.ಇ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಪಾಕ್ ಪರ ಘೋಷಣೆಗಳನ್ನು ಕೂಗಿದ್ದು, ಅವರುಗಳನ್ನು ಬಂಧಿಸಿ ನಂತರ ಬಿಡುಗಡೆಗೊಳಿಸಿರುವ ಕ್ರಮವನ್ನು ವಿರೋಧಿಸಿ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳಬೇಕೆಂದು. | ಉತ್ತರಿಸಲಾಯಿತು |
| 02. | ಶ್ರೀ ಎಸ್.ವಿ.ಸಂಕನೂರ | 18.02.2020 | ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹಾಗೂ ಖಾಸಗಿ ಅನುದಾನಿತ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿಗೆ ಕಳೆದ ಹಲವು ತಿಂಗಳಿನಿಂದ ವೇತನ ಬಿಡುಗಡೆ ಮಾಡದಿರುವ ಬಗ್ಗೆ. | ಉತ್ತರಿಸಲಾಯಿತು |
| 03. | ಶ್ರೀ ವಿಜಯಸಿಂಗ್ | 18.02.2020 | ರೈತರು ಬೆಳೆದ ತೊಗರಿಬೇಳೆಯನ್ನು ಹತ್ತು ಕ್ವಿಂಟಾಲಿನಿಂದ ಇಪ್ಪತ್ತು ಕ್ವಿಂಟಾಲ್‌ವರೆಗೆ ಖರೀದಿಮಿತಿಯನ್ನು ಹೆಚ್ಚಿಸಿರುವುದಾಗಿ ತಿಳಿಸಿದ್ದು | ಉತ್ತರಿಸಲಾಯಿತು |

| | | | | |
|---|---|---|---|---|
| | | | ಇದುವರೆವಿಗೂ ಕ್ರಮಕೈಗೊಳ್ಳದಿರುವ ಬಗ್ಗೆ. | |
| 04. | ಶ್ರೀ ಎಸ್.ನಾಗರಾಜ್ (ಸಂದೇಶ ನಾಗರಾಜ್) | 19.02.2020 | ಶ್ರೀಕ್ಷೇತ್ರ ಮಲೈ ಮಹದೇಶ್ವರ ಬೆಟ್ಟದಲ್ಲಿ, ಅಳವಡಿಸಲಾಗಿರುವ ಸೋಲಾರ ವಿದ್ಯುತ್ ದೀಪಗಳು ದುರಸ್ಥಿಗೊಂಡಿದ್ದು, ಕೂಡಲೇ ಕ್ರಮಕೈಗೊಳ್ಳುವ ಬಗ್ಗೆ. | ಉತ್ತರಿಸಲಾಯಿತು |
| 05. | ಶ್ರೀ ಕೆ.ಟಿ. ಶ್ರೀಕಂಠೇಗೌಡ | 19.02.2020 | ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವುದನ್ನು ನಿಲ್ಲಿಸಿರುವುದರಿಂದ ಕಬ್ಬು ಬೆಳೆಗಾರರು ಆತಂಕಕ್ಕೀಡಾಗಿರುವ ಬಗ್ಗೆ. | ಉತ್ತರಿಸಲಾಯಿತು |
| 06. | ಡಾ:ಜಯಮಾಲ ರಾಮಚಂದ್ರ | 19.02.2020 | ಬೆಂಗಳೂರು ನಗರ ವ್ಯಾಪ್ತಿಯಲ್ಲಿ ರೇಬಿಸ್ ಕಾಯಿಲೆಯಿಂದ ಐದು ಜನರು ಬಲಿಯಾಗಿರುವುದರಿಂದ, ನಗರದಲ್ಲಿರುವ ನಾಯಿಗಳಿಗೆ ಲಸಿಕೆ ಹಾಕಿಸಿ ಶಾಶ್ವತವಾಗಿ ಉಳಿಯುವ ಬಣ್ಣ ಬಳಿಯುವ ಮೂಲಕ ಕ್ರಮ ಕೈಗೊಳ್ಳುವುದಲ್ಲದೆ, ಈ ಸಂಬಂಧ ಸಾರ್ವಜನಿಕರಿಗೆ ಪ್ರಕಟಣೆಯ ಮೂಲಕ ಎಚ್ಚರಿಸುವ ಬಗ್ಗೆ. | ಉತ್ತರಿಸಲಾಯಿತು |
| 07. | ಶ್ರೀ ಎಸ್.ವ್ಹಿ.ಸಂಕನೂರ | 19.02.2020 | ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಗೆ ಬರುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮುಖ್ಯೋಪಾಧ್ಯಾಯರು ಏಪ್ರಾನ್ ಖರೀದಿಯಲ್ಲಿ ಅವ್ಯವಹಾರ ನಡೆಸಿರುವುದಾಗಿ ತಿಳಿಸಿ, ಅವರಿಂದ ಹೆಚ್ಚುವರಿ ಹಣವನ್ನು ಮರುಭರಣ ಮಾಡಬೇಕೆಂದು ಹೊರಡಿಸಿರುವ ಆದೇಶಕ್ಕೆ ತಡೆಯಾಜ್ಞೆ ನೀಡುವ ಕುರಿತು. | ಉತ್ತರಿಸಲಾಯಿತು |
| 08. | ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ | 19.02.2020 | ಉಕ್ಕಿ ಹರಿದ ನೆರೆಗೆ ಬದುಕು ಕಳೆದುಕೊಂಡ ನೆರೆ ಸಂತ್ರಸ್ಥರಿಗೆ ದಾನಿಗಳು ಕೊಟ್ಟಿದ್ದನ್ನು ತಲುಪಿಸುವಲ್ಲಿ ಧಾರವಾಡ ಜಿಲ್ಲಾಡಳಿತ ವಿಫಲವಾಗಿರುವ ಬಗ್ಗೆ. | ಉತ್ತರಿಸಲಾಯಿತು |

| | | | | |
|---|---|---|---|---|
| 09. | ಶ್ರೀ ಕೆ.ಟಿ. ಶ್ರೀಕಂಠೇಗೌಡ | 20.02.2020 | ಕರ್ನಾಟಕ ರಸ್ತೆ ಸಾರಿಗೆ ನಿಗಮದ ಉದ್ಯೋಗಿಗಳನ್ನು ರಾಜ್ಯಸರ್ಕಾರಿ ನೌಕರರನ್ನಾಗಿ ಪರಿಗಣಿಸುವ ಕುರಿತು. | ಉತ್ತರಿಸಲಾಯಿತು |
| 10. | ಶ್ರೀ ಎಸ್.ಎಲ್. ಭೋಜೇಗೌಡ | 20.02.2020 | ಬಿ.ಪಿ.ಎಲ್ ಕಾರ್ಡ್ ದಂಧೆ ಹೆಚ್ಚಾಗಿ, ಅರ್ಹ ಫಲಾನುಭವಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ. | ಉತ್ತರಿಸಲಾಯಿತು |
| 11. | ಶ್ರೀ ಕೆ.ಎ.ತಿಪ್ಪೇಸ್ವಾಮಿ | 20.02.2020 | ಕೇರಳ ರಾಜ್ಯದಿಂದ ಜೈವಿಕ ವೈದ್ಯಕೀಯ ತ್ಯಾಜ್ಯವನ್ನು ಗಡಿ ಜಿಲ್ಲೆಗಳ ಹಲವು ತಾಲ್ಲೂಕುಗಳಲ್ಲಿ ಕಾನೂನು ಬಾಹಿರವಾಗಿ ಸುರಿಯುತ್ತಿರುವ ಬಗ್ಗೆ. | ಉತ್ತರಿಸಲಾಯಿತು |
| 12. | ಶ್ರೀ ಶರಣಪ್ಪಮಟ್ಟೂರ್ | 20.02.2020 | ಅನುದಾನಿತ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಧ್ಯಾಪಕರಿಗೆ ವೇತನ ಪಾವತಿಸದಿರುವ ಬಗ್ಗೆ. | ಉತ್ತರಿಸಲಾಯಿತು |
| 13. | ಡಾ: ಜೈಮಾಲ ರಾಮಚಂದ್ರ | 20.02.2020 | ಕರಾವಳಿ ಪ್ರದೇಶಗಳಲ್ಲಿ ಸಹಕಾರ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಚಾರ ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುವ ಬಗ್ಗೆ. | ಉತ್ತರಿಸಲಾಯಿತು |
| 14. | ಶ್ರೀ ತಿಪ್ಪಣ್ಣ ಕಮಕನೂರ | 20.02.2020 | ಅವರು ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ. | ಉತ್ತರಿಸಲಾಯಿತು |
| 15. | ಶ್ರೀ. ಆರ್.ಬಿ.ತಿಮ್ಮಾಪೂರ | 20.02.2020 | ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಕಂಪ್ಯೂಟರ್‌ಗಳ ನಿರ್ವಹಣೆಯಿಲ್ಲದೆ ಅವ್ಯವಸ್ಥೆಯಿಂದ ದಸ್ತಾವೇಜುಗಳ ನೋಂದಣಿಯಾಗದೆ ಅನಾನುಕೂಲವಾಗಿರವ ಬಗ್ಗೆ. | ಉತ್ತರಿಸಲಾಯಿತು |

## ವಿವರಣಾ ಪಟ್ಟಿ–7
## ನಿಯಮ 59ರಡಿ ಸೂಚನೆಗಳು

| | | | |
|---|---|---|---|
| 01. | ಶ್ರೀ ಎಸ್.ಆರ್. ಪಾಟೀಲ್, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರೆ ಸದಸ್ಯರುಗಳು | ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ್ಯ ಸರ್ಕಾರವು ಸಂಪೂರ್ಣವಾಗಿ ವಿಫಲವಾಗಿರುವುದರಿಂದ ರಾಜ್ಯದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರವ ಬಗ್ಗೆ | |
| 02. | ಮಾನ್ಯ ಶಾಸಕರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ನೀಡಿರುವ ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿದೆ. ನಾಳೆ ಚರ್ಚೆಗೆ ಅವಕಾಶ ನೀಡುವುದಾಗಿ ಮಾನ್ಯ ಸಭಾಪತಿಯವರು ತಿಳಿಸಿದರು. | | |

## ವಿವರಣಾ ಪಟ್ಟಿ–9

ಪ್ರಸ್ತುತ ಅಧಿವೇಶನದಲ್ಲಿ ಮಂಡಿಸಿ ಅಂಗೀಕರಿಸಲಾದ ವಿಧೇಯಕಗಳ ವಿವರ

| ಕ್ರ ಸಂ | ವಿಧೇಯಕದ ಹೆಸರು | ವಿಧಾನಸಭೆಯಲ್ಲಿ ಅಂಗೀಕರಿಸಿರುವ ದಿನಾಂಕ | ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಿರುವ ದಿನಾಂಕ |
|---|---|---|---|
| 1 | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ ವಿಧೇಯಕ, 2020 | 16.03.2020 | 18.03.2020 |
| 2 | ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ,2020 | 17.03.2020 | 18.03.2020 |
| 3 | ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನದ ನಿಯಂತ್ರಣ ವಿಧೇಯಕ, 2020 | 17.03.2020 | 20.03.2020 |
| 4 | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ, 2020 | 18.03.2020 | 23.03.2020 |
| 5 | ಕರ್ನಾಟಕ ನಾವಿನ್ಯತಾ ಪ್ರಾಧಿಕಾರ ವಿಧೇಯಕ, 2020 | 18.03.2020 | 23.03.2020 |

| | | | |
|---|---|---|---|
| 6 | ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020 | 19.03.2020 | 23.03.2020 |
| 7 | ಕರ್ನಾಟಕ ರಾಜಭಾಷಾ (ತಿದ್ದುಪಡಿ) ವಿಧೇಯಕ, 2020 | 19.03.2020 | 23.03.2020 |
| 8 | ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2020 | 19.03.2020 | 23.03.2020 |
| 9 | ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, 2020 | 19.03.2020 | 23.03.2020 |
| 10 | ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2020 | 20.03.2020 | 23.03.2020 |
| 11 | ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2020 | 20.03.2020 | 23.03.2020 |
| 12 | ಕರ್ನಾಟಕ ಬಹಿರಂಗ ಸ್ಥಳಗಳ (ವಿರೂಪಗೊಳಿಸುವುದನ್ನು ಪ್ರತಿಬಂಧಿಸುವ) (ತಿದ್ದುಪಡಿ) ವಿಧೇಯಕ, 2020 | 20.03.2020 | 23.03.2020 |
| 13 | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ(ತಿದ್ದುಪಡಿ) ವಿಧೇಯಕ, 2020 | 20.03.2020 | 23.03.2020 |
| 14 | ಕರ್ನಾಟಕ ಧನವಿನಿಯೋಗ ವಿಧೇಯಕ, 2020 | 24.03.2020 | 24.03.2020 |
| 15 | ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕ, 2020 | 24.03.2020 | 24.03.2020 |
| 16 | ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2020 | 24.03.2020 | 24.03.2020 |